ಊರಿಕೊಂಡಷ್ಟೂ ಕಡಿಮೆ ಕಡಿಮೆ ಗಂಡಸಾಗುತ್ತ ಹೋದ. ಆಫೀಸಿನಲ್ಲಿ ಚಿಕ್ಕ ಹುಡುಗರ ಸಖ್ಯ ಬೆಳೆಸಿದ. ಸಖರನ್ನಾಗಿಸಿಕೊಂಡ. ಕೇಳುವಾಗಲೆಲ್ಲ, 'ಸೋ ವಾಟ್ಸ್, ಹನೀ... ವಿ ಆರ್ ಜಸ್ಟ್ ಫ್ರೆಂಡ್ಸ್...' ಅಂತಂದು ಸತಾಯಿಸಿದ. ಮದುವೆ ಸುಮ್ಮಗೊಂದು ಒಡಂಬಡಿಕೆಯಾಯಿತು.

ಬದುಕು ಇಂತಹ ಸಂದರ್ಭವನ್ನು 'ಈ' ಇನ್ನೊಂದಕ್ಕಾಗಿಯೇ ಕಲ್ಪಿಸಿತ್ತನಿಸುತ್ತದೆ. ಮುಂಬೈ ಏರ್‌ಪೋರ್ಟ್‌ನಲ್ಲಿ ಅಚಾನಕ್ಕಾಗಿ ಇವನು ಎದುರಾದ. ಬೆಂಗಳೂರಿಗೆ ಬರುವವನಿದ್ದ. ಬ್ಯುಸಿನೆಸ್ ಟ್ರಿಪ್ಪಂತಂದ. 'ಇಂಡಿಯಾಕ್ಕೆ ವಾಪಸಾಗಿ ನಾಲ್ಕು ವರ್ಷ ಆಯಿತು, ಇಂದ್... ಸ್ಟಾರ್ಟೆಡ್ ಸಮ್ಥಿಂಗ್ ನ್ಯೂ ಹಿಯರ್... ಬೆಂಗಳೂರಿಗೆ ಆಗಾಗ ಬರೋದಿದೆ...' ಅಂದ. 'ಮದುವೆಗಿದುವೆಯ ಜಂಜಟ ಬೇಡ ಅನಿಸುತ್ತೆ ಕಣೇ... ಹೀಗೇ ಚೆನ್ನಿದೆ...' ಬಲು ಆರಾಮಾಗಿ ಹೇಳಿದ. ನಾನೂ ಹೇಳಿಕೊಂಡೆ. ಗಂಡನ ಬಗೆಗಿನ ಅಸಂತೋಷದ ಹೊರತಾಗಿ ಎಲ್ಲವನ್ನೂ ತೋಡಿಕೊಂಡೆ. ನಾನೂ ಚೆನ್ನಿದ್ದೇನೆ... ಅಂತನ್ನುವಾಗ ನನ್ನಲ್ಲಿ ಆರಾಮವಿರಲಿಲ್ಲ.

ಸಾಕಷ್ಟು ಭೇಟಿಗಳಾದವು. ಕೆಲಸದ ಮೇರೆಗೆ ಬೆಂಗಳೂರಿಗೆ ಬಂದಾಗಲೆಲ್ಲ ಫೋನೋ ಮೆಸೇಜೋ ಮಾಡುವನು. ಲಂಚುಡಿನ್ನರುಗಳ ನೆಪ. ಈ ನಡುವೊಂದು ಅನೂಹ್ಯ ಸನ್ನಿವೇಶದಲ್ಲಿ ಇಬ್ಬರೂ ಪರಸ್ಪರ ಒಲಿದುಹೋದೆವು. ನಾವು ಒಲಿದೆವೆಂಬುದಕ್ಕೂ ಹೆಚ್ಚಿಗೆ ಮೈಯೊಲಿದುಹೋದವು.

ಅಜೀಬನಿಸುತ್ತಿತ್ತು. ಮದುವೆಯಾದವಳು ನಾನು; ಸರಿಯೇ ಎಂಬ ಜಿಜ್ಞಾಸೆ. ಒಂದಾನೊಮ್ಮೆ ಇವನ ಕುರಿತು ಹಾತೊರೆದಿದ್ದೆನಷ್ಟೆ; ತಪ್ಪೇನು ಎಂಬ ಸಮಜಾಯಿಷಿ. 'ವಿ ಆರ್ ಜಸ್ಟ್ ಫ್ರೆಂಡ್ಸ್' ಎಂದು ನನ್ನ ಗಂಡ ಕೊಡುವಂಥದೇ ಸಮರ್ಥನೆ.

'ಪ್ರೀತಿ ಮತ್ತು ಕಾಮ ಬೇರೆ ಬೇರೆ... ನಾವು ಬರೇ ಗೆಳೆಯರಿದ್ದುಕೊಂಡೇ ಕಾಮಿಸಬಹುದು...' ಎಂದು ಬಲು ಖಾತ್ರಿಯಿಂದ ಖಡಕ್ಕನೊಮ್ಮೆ ಇವನು ಹೇಳಿದ. ಇದು ಸರಿಯೇ, ಸೂಕ್ತವೇ... ತಪ್ಪೇ, ಅನರ್ಥವೇ ಎಂದೆಲ್ಲ ವಿವೇಚಿಸುವ ಪ್ರಮೇಯವೇ ನನಗಿರಲಿಲ್ಲ. ಉಂಟಾಗಲಿಲ್ಲ. ಇಷ್ಟಾಗಿ, ಮೈ ಹಸಿದ ಹಸಿವಿರುವಾಗ ಪಥ್ಯವೇನು? ತಥ್ಯವೇನು?

'ಹೇಗೆ?' ನಡುವೊಮ್ಮೆ ಕೇಳಿದೆ.

'ಕಾಮ ಭೂಮಿಯದ್ದು... ಪ್ರೀತಿ ಆಕಾಶದ್ದು...'

'....!!'

'ಕಾಮ ಮೈಯ ಸಮಾಚಾರ. ಪ್ರೀತಿ ಮನಸ್ಸಿನದು... ಗೆಳೆಯರ ನಡುವೆ ಕಾಮ ಸಾಧ್ಯವಾದರೂ ಆದೀತು. ಪ್ರೀತಿಯಲ್ಲ...'

'....?!'

'ಪ್ರೀತಿಯುಂಟಾದಾಗ ಗೆಳೆತನ ಉಳಿಯೋಲ್ಲ... ಫ್ರೆಂಡ್ಸ್ ಕೆನ್ ಡೆಫಿನೆಟ್ಲೀ ಡು ಸೆಕ್ಸ್... ಬಟ್ ದೆ ಡೋಂಟ್ ಲವ್... ಕಾಮಿಸುವುದರಲ್ಲಿ ಪ್ರೀತಿಯಿರೋದಿಲ್ಲ!'

ಎಂಥದೋ ತರ್ಕ. ವ್ಯವಧಾನವೆಲ್ಲಿತ್ತು? ಮತ್ತೆ ಮತ್ತೆ ಸೇರಿದ್ದಷ್ಟೇ ಬಂತು! 'ಹೀಗೇ ಇದ್ದುಬಿಡೋಣ, ಇಂದ್... ಒಬ್ಬರಲ್ಲೊಬ್ಬರು ಮನಸ್ಸು ತೊಡಗಿಸದೆ...' ಎಂದು ಪದೇ ಪದೇ ಹೇಳಿದ. ಪದೇ ಪದೇ ಕಾಮಿಸಿದ.

ನಾನೂನೂ ಅಷ್ಟೆ, ಇವನಷ್ಟೇ ಪದೇ ಪದೇ.

ಈ ನಡುವೆ ಎಲ್ಲಿತ್ತೋ ಏನೋ 'ಅದು' ನನ್ನಲ್ಲಿ ತಾನಾಗಿ ಉಂಟಾಗಿಬಂತು. ಉಂಟಾಗಿದ್ದೇ ಸೈ, ಅವನಲ್ಲಿ ಮನಸಾರೆ ಮನಸುಂಟಾಗಿಬಿಟ್ಟಿತು. ಇವನಿರದೆ ಏನಿರದೆನ್ನುವ ಹಾತೊರೆತ. ಎಂದು ಕಂಡೇನೋ ಎಂದು ತವಕಿಸುವ ತವಕ.